# ಸಾಹಿತಿಗಳ ಒಡಕಲು ಪ್ರತಿಮೆ

**ಈ** ಹಿಂದೆ ಸಾಹಿತಿಗಳ ಮಾತಿಗೆ, ಹೇಳಿಕೆಗೆ ಜನಮಾನಸದಲ್ಲಿ ಒಂದು ಘನತೆ, ಮಹತ್ವ ಇರುತ್ತಿತ್ತು. ಅದು ಜನರ ಒಳಮಾತಿಗೆ ದನಿ ಕೊಡುತ್ತಿತ್ತು, ಅಭಿಪ್ರಾಯ ರೂಪಿಸುತ್ತಿತ್ತು; ಯೋಚನೆಗಳನ್ನು ತಿದ್ದುತ್ತಿತ್ತು. ಸಾಹಿತಿಯ ನಡೆಯನ್ನು ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಶಿವರಾಮ ಕಾರಂತರು ಒಂದು ಹೇಳಿಕೆ ನೀಡಿದರೆ, ಕು.ವೆಂ.ಪು. ತಮ್ಮ ಪ್ರತಿಕ್ರಿಯೆ ಕೊಟ್ಟರೆ ಸರ್ಕಾರ ಸೇರಿದಂತೆ ಎಲ್ಲರೂ ಅದನ್ನು ಗಂಭೀರವಾಗಿ ಪರಿಗಣಿಸುತ್ತಿದ್ದರು. ಸಾಹಿತಿಯ ಆ ಘನಗಂಭೀರ ಬಿಂಬ ಪ್ರಖರವಾಗಿ ಈಗ ಉಳಿದಿಲ್ಲ; ಆ ದನಿ ಅದೆಲ್ಲೋ ಏಳಲಾಗದ ಆಳದ ಕೆಸರಲ್ಲಿ ಹೂತುಹೋಗಿದೆ. ರಾಜಕಾರಣಿಯ ಅರಚುವಿಕೆಗೂ ಈ ಬುದ್ಧಿಜೀವಿಗಳ ದನಿಗೂ ಅಂಥ ವ್ಯತ್ಯಾಸ ಈಗಿಲ್ಲ. ಎಲ್ಲರ ಮಾತಿನಂತೆ ಅದೂ ಒಂದಾಗಿ, ಪ್ರಕಟವಾಗಿ ಕಣ್ಮರೆಯಾಗುತ್ತದೆ.

ಇವೆಲ್ಲದಕ್ಕೂ ಕಾರಣಗಳಿವೆ. ಮೊದಲನೆಯದು ತಮ್ಮ ವ್ಯಕ್ತಿತ್ವವನ್ನು ಶುಭ್ರವಾಗಿ ಕಾಪಾಡಿಕೊಂಡ, ಬದುಕು–ಬರಹಕ್ಕೆ ಫರಕಿಲ್ಲದಂತೆ ಬಾಳುವ ಸಾಹಿತಿಗಳು ಈಗ ಕಡಿಮೆ. ಇನ್ನೊಂದು ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷ, ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ, ಪ್ರಶಸ್ತಿಗಳಿಗೆ ಮಂತ್ರಿಗಳ ಮನೆ ಬಾಗಿಲು ಕಾಯುವ, ಅದಕ್ಕಾಗಿ ತಮ್ಮ ಪ್ರತಿಭೆಯನ್ನು ಅಡವಿಟ್ಟ, ಜಾತಿ, ಪ್ರಾದೇಶಿಕತೆಯ ರಾಜಕೀಯ ಮಾಡುವ ಸಾಹಿತಿಗಳು ಇರುವಾಗ ಅವರ ಮಾತಿಗೆ ಮಹತ್ವ ಬರುವುದು ಸಾಧ್ಯವಿಲ್ಲ. ಅವರು ಅಂಥ ಸ್ಥಾನಮಾನಗಳು ಸಿಕ್ಕ ಬಳಿಕ ಸರ್ಕಾರವನ್ನು ಟೀಕಿಸುವ ನೈತಿಕ ಹಕ್ಕನ್ನೇ ಕಳೆದುಕೊಳ್ಳುತ್ತಾರೆ. ಆದರೆ ಆ ಬಗೆಯ ಇಕ್ಕಟ್ಟಿನ ಮಾತನ್ನು ಆಡಿ ಮುಜುಗರಕ್ಕೆ ಸಿಕ್ಕಿಕೊಳ್ಳದ ಜಾಣರು ಅವರು. ಅಧಿಕಾರಸ್ಥರೊಂದಿಗಿನ ಸಾಹಿತಿಗಳ ಪ್ರೇಮ ಗುಟ್ಟಾಗಿ ಉಳಿದಿಲ್ಲ. ಅದು ಈಗೀಗ ಜನರ ಗೇಲಿಯ ವಸ್ತುವೂ ಆಗಿದೆ!

ಸ್ಥಾನಮಾನದ ಹಂಗು ತೊರೆದವರು ಮಾತ್ರ ಜನರ ದನಿಯಾಗಲು ಸಾಧ್ಯ. ಅದಕ್ಕೆ ಗಟ್ಟಿಯಾದ ನೈತಿಕ ವ್ಯಕ್ತಿತ್ವ ಬೇಕಾಗುತ್ತದೆ. ಅದು ಡಿ.ವಿ.ಜಿ., ಲಂಕೇಶ್, ತೇಜಸ್ವಿ ತರಹದ ಲೇಖಕರಲ್ಲಿ ಇತ್ತು. ಈಗ ಆ ಬಗೆಯ ಸಾರ್ವಜನಿಕ ವ್ಯಕ್ತಿತ್ವಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಸಮೂಹದ ದನಿಯಾಗುವ, ಅದನ್ನು ಅಧಿಕಾರದ ಗದ್ದುಗೆಗೂ ಕೇಳುವಂತೆ ಮಾಡುವ ಸಾಹಿತಿಗಳು ಈ ಕಾಲದಲ್ಲಿ ಅಪರೂಪ. ಕೆಲ ನಾಜೂಕಯ್ಯ ಸಾಹಿತಿಗಳು ತಮ್ಮ ಮನೆಮಠ ಬಿಟ್ಟು ಹೊರಬರುವುದಿಲ್ಲ. ಸಜ್ಜನರು ತಮ್ಮ ಮಹಾಕೃತಿಗಳ ಪ್ರಸಾರದಲ್ಲಿ ಮುಳುಗಿರುತ್ತಾರೆ. ತಮ್ಮ ಪ್ರಭಾವಳಿಯನ್ನು ಬೆಳೆಸಿಕೊಳ್ಳುವ ಭರದಲ್ಲಿ ಅವರಿಗೆ ಸಮಾಜ, ನಾಡಿನ ನೆಲ, ಜಲ, ನುಡಿಯ ಕುರಿತಂತೆ ಕ್ರಿಯಾಶೀಲರಾಗಲು ಪುರುಸೊತ್ತಾಗುವುದಿಲ್ಲ.

ಸಾಹಿತಿಯ ಸಾರ್ವಜನಿಕವಾದ ಬೌದ್ಧಿಕ ಪ್ರತಿಮೆಗೆ ಹಲವು ಬಿರುಕುಗಳು ಮೂಡಿವೆ. ಆ ಹಿಂದಿನ ಬಿಂಬ ಅವರಿಂದಲೇ ಅಳಿಸಿಹೋಗಿರುವುದರಿಂದ ಅದು ಮರಳುತ್ತದೆ ಎಂಬ ಭರವಸೆಯೂ ಉಳಿದಿಲ್ಲ. ಸಮಾಜದ ಆತ್ಮಸಾಕ್ಷಿಯಾಗಿ ಅದನ್ನು ಆಗಾಗ ಎಚ್ಚರಿಸುತ್ತಿದ್ದ ಸಾಹಿತಿಗಳು ತಾವು ಸಮಾಜದಿಂದ ಪಡೆದದ್ದರಲ್ಲಿ ತುಸುವಾದರೂ ಸಮಾಜಕ್ಕೆ ಹಿಂತಿರುಗಿಸದೆ ಕೃಪಣರಾಗುತ್ತಿದ್ದಾರೆ. ಸಮಾಜದಿಂದ ದೂರವಾಗಿ ತಮ್ಮದೇ ಸ್ವವೃತ್ತದಲ್ಲಿ ಸಿಲುಕಿರುವುದು ಚಿಂತನೆಗೆ ಅರ್ಹವಾಗಿದೆ.

**ಸಂದೀಪ ನಾಯಕ**

